# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

ವಿ ಟಿ ಯು ಅಧಿನಿಯಮ ೧೯೯೪ ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ

# Visvesvaraya Technological University

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka, India

Dr. B.E. Rangswamy Ph.D.
Registrar

Phone: (0831) 2498100
Fax :(0831) 2405467


**Ref: VTU/BGM/Aca-OS/Cirs/ 2022-23/ 7484**

**Date :** 23 MAR 2023

## ಸುತ್ತೋಲೆ

ವಿಷಯ : 2022-23ನೇ ಸಾಲಿನ ಬಿ.ಇ. 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ಆಡಳಿತ ಮಂಡಳಿಯವರು ಡಿಪ್ಲೋಮಾಧಾರಕರುಗಳಿಗೆ ಲ್ಯಾಟರಲ ಎಂಟ್ರಿ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಭಾರ್ತಿಯಾಗದೇ ಉಳಿದ ಸೀಟುಗಳನ್ನು ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆಸೀಟುಗಳನ್ನು ಹಂಚಿಕೆಮಾಡಿತದನಂತರ, ಉಳಿದ ಸೀಟುಗಳನ್ನು ಬಿ.ಎಸ್ಸಿ. ಪದವಿಧರರಿಗೆ ಹಂಚಿಕೆ ಮಾಡಲು ಅನುಮೋದನೆ ನೀಡುವ ಕುರಿತು

ಉಲ್ಲೇಖ: 1 ಸರ್ಕಾರದ ಆದೇಶ ಸಂಖ್ಯೆ ಇಡಿ 47 ಡಿಟಿಇ 2023 ದಿ: 21-03-2023

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ ಇಡಿ 47 ಡಿಟಿಇ 2023 ದಿ: 21-03-2023 ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ. ಸದರಿ ಸರ್ಕಾರದ ಆದೇಶವನ್ನು ಪಾಲಿಸಲು ಈ ಮೂಲಕ ತಿಳಿಸಲಾಗಿದೆ.

ಆದೇಶದಂತೆ

Rangswamy B E 23/03/23

ಕುಲಸಚಿವರು

ಆಡಕ: ಮೇಲಿನಂತೆ

**To,**

1. **The of Principals of All Engineering Colleges (Constituent, Affiliated, Autonomous) under the ambit VTU, Belagavi**
2. **The Chairpersons/ Programme coordinators of all departments of VTU**

**Copy to:**

1. Hon'bleVice- Chanellor through the Secretay to VC,VT U, Belagavi fo r kind information
2. The Regional Directors (I /C) of al the Regional Officesof VTU for kind information
3. The Director(I/c), ITISMU, VTU, Belagavi for needful
4. The Special officer, Mangalore Extension Centre, VTU,
5. The Special Officers and Case workers of Academic Section, VTU, Belagavi

# ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** 2022-23ನೇ ಸಾಲಿನ ಬಿ.ಇ 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ಆಡಳಿತ ಮಂಡಳಿಯವರು ಡಿಪ್ಲೋಮಾಧಾರಕರುಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಭರ್ತಿಯಾಗದೇ ಉಳಿದ ಸೀಟುಗಳನ್ನು ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿ ತದನಂತರ, ಉಳಿದ ಸೀಟುಗಳನ್ನು ಬಿ.ಎಸ್ಸಿ ಪದವೀಧರರಿಗೆ ಹಂಚಿಕೆ ಮಾಡಲು ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಇಡಿ 52 ಟಿಇಸಿ 2019, ದಿನಾಂಕ:15.06.2019.
2. ಸರ್ಕಾರದ ಆದೇಶ ಸಂಖ್ಯೆ:ಇಡಿ 36 ಡಿಟಿಇ 2022, ದಿನಾಂಕ: 04.03.2022.
3. ಆಯುಕ್ತಾಲಯದ ಏಕ ಕಡತ ಸಂಖ್ಯೆ: DTE-ADMI0ACM1/16/2023-JD-DEPT TECH EDUCATION(1032437).

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ, 2019-20ನೇ ಸಾಲಿಗೆ ಎಐಸಿಟಿಇ, ನವದೆಹಲಿರವರು ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ/3ನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಅನುಮೋದಿತ ಇನ್‌ಟೇಕ್‌ನಲ್ಲಿ ಗರಿಷ್ಠ ಶೇಕಡ 10ರಷ್ಟು ಸೀಟುಗಳನ್ನು (up to a maximum of 10% of the "Approved Intake" which shall be over and above, Supernumerary to the approved intake, plus the unfilled vacancies of the First year) ಹಾಗೂ ಪ್ರಥಮ ವರ್ಷದಲ್ಲಿ ಖಾಲಿ ಉಳಿದ ಸೀಟುಗಳನ್ನು ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಪರಿಗಣಿಸಲು ಅವಕಾಶ ಕಲ್ಪಿಸಿರುವುದನ್ನು ತಿಳಿಸಿ, ಈ ಹಿಂದೆ ಶೇ.20ರಷ್ಟು ಸೀಟುಗಳನ್ನು ಪರಿಗಣಿಸುವುದನ್ನು ಕೈಬಿಟ್ಟು, ಎಐಸಿಟಿಇ, ನವದೆಹಲಿರವರ ಅಪ್ರುವಲ್ ಪ್ರೋಸೆಸ್ ಹ್ಯಾಂಡ್ ಬುಕ್ ಅನ್ವಯ ಶೇ.10ರಷ್ಟು ಸೀಟುಗಳನ್ನು ಪ್ರವೇಶಾತಿಗೆ ಪರಿಗಣಿಸಲು ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ, 2021-22ನೇ ಸಾಲಿಗೆ ಎಐಸಿಟಿಇ, ನವದಹಲಿ ರವರ ಮಾರ್ಗಸೂಚಿಯನ್ವಯ ಲ್ಯಾಟರಲ್ ಎಂಟ್ರಿ ಮೂಲಕ ಎರಡನೇ ವರ್ಷದ/ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಅನುಮೋದಿತ ಇನ್‌ಟೇಕ್‌ನಲ್ಲಿ ಗರಿಷ್ಠ ಶೇಕಡ 10ರಷ್ಟು ಸೀಟುಗಳನ್ನು (up to a maximum of 10% of the "Approved Intake" which shall be over and above, Supernumerary to the approved intake, plus the unfilled vacancies of the First year) ಹಾಗೂ ಪ್ರಥಮ ವರ್ಷದಲ್ಲಿ ಖಾಲಿ ಉಳಿದ ಸೀಟುಗಳನ್ನು ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಪರಿಗಣಿಸಲು ಆದೇಶಿಸಲಾಗಿದೆ.

ಮುಂದುವರೆದು, 2020-21ನೇ ಸಾಲಿನಲ್ಲಿ ಪ್ರಥಮ ವರ್ಷದ ಬಿ.ಇ ಪ್ರವೇಶಾತಿ ನಂತರ ಖಾಲಿ ಉಳಿಯುವ ಸೀಟುಗಳನ್ನು 2021-22ನೇ ಸಾಲಿನ ಬಿ.ಇ 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ಆಡಳಿತ ಮಂಡಳಿಯವರು ಡಿಪ್ಲೋಮಾಧಾರಕರುಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಭರ್ತಿಯಾಗದೇ ಉಳಿದ ಸೀಟುಗಳನ್ನು ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿ ತದನಂತರ, ಉಳಿದ ಸೀಟುಗಳನ್ನು ಬಿ.ಎಸ್ಸಿ ಪದವೀಧರರಿಗೆ ಹಂಚಿಕೆ ಮಾಡಲು ನಿಗದಿತ ಷರತ್ತುಗಳೊಂದಿಗೆ ಅನುಮೋದನೆ ನೀಡಲಾಗಿರುತ್ತದೆ.

....2

Scanned with CamScanner

2022-23ನೇ ಸಾಲಿಗೆ ಡಿಪ್ಲೋಮಾ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ/3ನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಸೀಟ್ ಮ್ಯಾಟ್ರಿಕ್ಸನ್ನು ಪರೀಕ್ಷಾ ಪ್ರಾಧಿಕಾರಕ್ಕೆ ನೀಡಬೇಕಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 47 ಡಿಟಿಇ 2023,**
**ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿಗೆ ಎಐಸಿಟಿಇ, ನವದೆಹಲಿ ರವರ ಮಾರ್ಗಸೂಚಿಯನ್ವಯ ಲ್ಯಾಟರಲ್ ಎಂಟ್ರಿ ಮೂಲಕ ಎರಡನೇ ವರ್ಷದ/ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಅನುಮೋದಿತ ಇನ್‌ಟೇಕ್‌ನಲ್ಲಿ ಗರಿಷ್ಠ ಶೇಕಡ 10ರಷ್ಟು ಸೀಟುಗಳನ್ನು (up to a maximum of 10% of the "Approved Intake" which shall be over and above, Supernumerary to the approved intake, plus the unfilled vacancies of the First year) ಹಾಗೂ ಪ್ರಥಮ ವರ್ಷದಲ್ಲಿ ಖಾಲಿ ಉಳಿದ ಸೀಟುಗಳನ್ನು ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಪರಿಗಣಿಸಲು ಆದೇಶಿಸಿದೆ.

2022-23ನೇ ಸಾಲಿನಿಂದ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ ಕೋರ್ಸುಗಳ 2ನೇ ವರ್ಷದ/3ನೇ ಸೆಮಿಸ್ಟರ್ (ಆರ್ಕಿಟೆಕ್ಚರ್ ಡಿಪ್ಲೋಮಾಧಾರಕರಿಗೆ ಪ್ರಥಮ ವರ್ಷದ ಬಿ.ಆರ್ಕಿಟೆಕ್ಚರ್ ಕೋರ್ಸಿಗೆ) ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಹ ಡಿಪ್ಲೋಮಾ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲು ಹಾಗೂ ಅರ್ಹ ಡಿಪ್ಲೋಮಾ ಅಭ್ಯರ್ಥಿಗಳಿಂದ ಅರ್ಜಿಯನ್ನು ನೇರವಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ಪಡೆಯಲು ಆದೇಶಿಸಿದೆ.

ಡಿಪ್ಲೋಮಾಧಾರಕರುಗಳಿಗೆ ಸಿಇಟಿ ಪರೀಕ್ಷೆ ನಡೆಸಿ ಅಭ್ಯರ್ಥಿಯ ಅರ್ಹತಾ ಪರೀಕ್ಷೆ ಹಾಗೂ ಸಿಇಟಿಯಲ್ಲಿ ಪಡೆದ ಅಂಕಗಳನ್ನು ಸಮಾನವಾಗಿ ಪರಿಗಣಿಸಿ ಸರ್ಕಾರವು ಹೊರಡಿಸುವ ಸೀಟ್ ಮ್ಯಾಟ್ರಿಕ್ಸರನ್ವಯ ಮೆರಿಟ್ ಪಟ್ಟಿ ತಯಾರಿಸಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಮೀಸಲಾತಿಯನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಕೌನ್ಸಿಲಿಂಗ್ ಮೂಲಕ ನಡೆಸಿ ತತ್ಸಮಾನ ಕೋರ್ಸುಗಳಿಗೆ ಹಂಚಿಕೆ ಮಾಡುವಂತೆ ಆದೇಶಿಸಿದೆ.

2021-22ನೇ ಸಾಲಿನಲ್ಲಿ ಪ್ರಥಮ ವರ್ಷದ ಬಿ.ಇ ಪ್ರವೇಶಾತಿ ನಂತರ ಖಾಲಿ ಉಳಿಯುವ ಸೀಟುಗಳನ್ನು 2022-23ನೇ ಸಾಲಿನ ಬಿ.ಇ 2ನೇ ವರ್ಷದ/ 3ನೇ ಸೆಮಿಸ್ಟರ್ ಆಡಳಿತ ಮಂಡಳಿಯವರು ಡಿಪ್ಲೋಮಾಧಾರಕರುಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಭರ್ತಿಯಾಗದೇ ಉಳಿದ ಸೀಟುಗಳನ್ನು ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿ ತದನಂತರ, ಉಳಿದ ಸೀಟುಗಳನ್ನು ಬಿ.ಎಸ್ಸಿ ಪದವೀಧರರಿಗೆ ಹಂಚಿಕೆ ಮಾಡುವುದು. ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 25265/2012 c/w ರಿಟ್ ಪಿಟಿಷನ್ ಸಂಖ್ಯೆ: 25265/2009 ಮತ್ತು 27399/2010ರ ಮೇಲೆ ನೀಡಿರುವ ಆದೇಶದಂತೆ ಪ್ರಥಮ ವರ್ಷದ ಬಿ.ಇ. ಪ್ರವೇಶಾತಿ ನಂತರ ಖಾಲಿ ಉಳಿಯುವ ಸೀಟುಗಳನ್ನು ಬಿ.ಇ. 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ಆಡಳಿತ ಮಂಡಳಿಯವರು ಲ್ಯಾಟರಲ್ ಎಂಟ್ರಿ ಮೂಲಕ ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿ ತದನಂತರ, ಉಳಿದ ಸೀಟುಗಳನ್ನು ಬಿ.ಎಸ್ಸಿ ಪದವೀಧರರಿಗೆ ಹಂಚಿಕೆ ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಅನುಮೋದನೆ ನೀಡಲಾಗಿದೆ.

....3

Scanned with CamScanner

1. ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸಂಬಂಧಿಸಿದಂತೆ ಖಾಸಗಿ ವೃತ್ತಿ ಶಿಕ್ಷಣ ಆಡಳಿತ ಮಂಡಳಿಗಳಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲನೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕಳುಹಿಸುವುದು.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಿಯಮಗಳ ಪ್ರಕಾರ ಅರ್ಜಿಗಳನ್ನು ಪರಿಶೀಲಿಸಿ ಅರ್ಹತಾ ಪಟ್ಟಿಯನ್ನು ತಯಾರಿಸಿ ಸಂಬಂಧಪಟ್ಟ ಸಂಸ್ಥೆಗಳಿಗೆ ಕಳುಹಿಸುವ್ರುದು.
3. ಆಡಳಿತ ಮಂಡಳಿಯವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ತಯಾರಿಸಿದ ಅರ್ಹತಾ ಪಟ್ಟಿಯಂತೆ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಿಕೊಳ್ಳುವುದು.
4. ಈ ರೀತಿಯ ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸರ್ಕಾರವು ನಿಗದಿಪಡಿಸಿದ ಶುಲ್ಕವನ್ನು ವಿಧಿಸುವುದು.

ಈ ಸಂಬಂಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು ಅಗತ್ಯ ಮಾಹಿತಿ/ದಾಖಲೆಗಳನ್ನು ನೀಡಿ ಸಹಕರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

(ನರಸಿಂಹಪ್ಪ) .03.2013
ಸರ್ಕಾರದ ಜಂಟಿ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

**ಗೆ,**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.
3. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಜ್ಞಾನಸಂಗಮ, ಬೆಳಗಾವಿ.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-560 001.
5. ಸಂಬಂಧಪಟ್ಟ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳ/ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned with CamScanner